# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೀದರ ಪೀಠ ಬಸವಕಲ್ಯಾಣ

## SPL.C. No.5002/2024

| | | |
|---|---|---|
| ಹೆಸರು | : | ಮಂಜನಗೌಡ |
| ತಂದೆಯ ಹೆಸರು | : | ರಾಮನಗೌಡ ಪಾಟೀಲ್ |
| ವಯಸ್ಸು | : | 36 ವರ್ಷ. |
| ಉದ್ಯೋಗ | : | ಪಿ.ಎಸ್.ಐ. ನಗರ ಪೊಲೀಸ ಠಾಣೆ ಯಾದಗೀರಿ |
| ವಾಸಸ್ಥಳ | : | ಯಾದಗೀರಿ |

**ಚಾ.ಸಾ.01**
**ಅ.ಸಾ. 04**

ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರವರಿಂದಃ-**

ನಾನು ಹುಮನಾಬಾದ ಪೊಲೀಸ ಠಾಣೆಯಲ್ಲಿ 23.04.2022 ರಿಂದ 31.07.2023 ರ ವರೆಗೆ ಪಿ.ಎಸ್.ಐ. (ಕಾ.ಸೂ) ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ದಿ: 07.07.2023 ರಂದು ನಾನು ಠಾಣೆಯಲ್ಲಿದ್ದಾಗ ಮುಂಜಾನೆ 10:00 ಗಂಟೆಯ ಸುಮಾರಿಗೆ ಮುಂಬೈಯಿಂದ ಹೈದ್ರಾಬಾದಕ್ಕೆ ಒಂದು ಬಲೆನೋ ಕಾರ ನಂಬರ ಟಿ.ಎಸ್. 15 ಎಫ್.ಜಿ. 1043 ನೇದ್ದರಲ್ಲಿ ಮಾದಕ ವಸ್ತುವನ್ನು ಹುಮನಾಬಾದ ಮಾರ್ಗವಾಗಿ ಹೈದ್ರಾಬಾದ ಕಡೆಗೆ ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದಿದ್ದರಿಂದ ತಕ್ಷಣ ನಾನು ಪೊಲೀಸ ಉಪಾಧೀಕ್ಷಕರು ಹುಮನಾಬಾದ ರವರಿಗೆ ಮನವಿ ಪತ್ರ ಸಲ್ಲಿಸಿ ದಾಳಿ ಕುರಿತು ಪರವಾನಿಗೆ ಪಡೆದುಕೊಂಡೆನು. ನಂತರ ಚಾ.ಸಾ. 5 ರವರನ್ನು ತೂಕ ಮಾಡಲು,

ಚಾ.ಸಾ. 4 ರವರನ್ನು ಫೋಟೋಗ್ರಾಫಿ ಮತ್ತು ವಿಡಿಯೋ ಮಾಡಲು ಮತ್ತು ಚಾ.ಸಾ. 19 ರವರನ್ನು ಪತ್ರಾಂಕಿತ ಅಧಿಕಾರಿ ಎಂದು, ತಹಸೀಲ ಕಛೇರಿಯಿಂದ ಚಾ.ಸಾ. 2 ಮತ್ತು 3 ರವರನ್ನು ಪಂಚರೆಂದು ಠಾಣೆಗೆ ಬರ ಮಾಡಿಕೊಂಡೆನು ಮತ್ತು ಠಾಣೆಯ ಸಿಬ್ಬಂದಿಗಳಾದ ಚಾ.ಸಾ. 8 ರಿಂದ 14, 16 ಮತ್ತು 17 ರವರು ಅವರಿಗೆ ವಿಷಯ ತಿಳಿಸಿ ಠಾಣೆಯಿಂದ ಬೆಳಿಗ್ಗೆ 10:30 ಗಂಟೆಗೆ ಎಲ್ಲರೂ ಇಲಾಖಾ ವಾಹನದಲ್ಲಿ ಹೊರಟು ಮತ್ತು ನಮ್ಮ ಸಿಬ್ಬಂದಿಗಳು ದ್ವಿಚಕ್ರ ವಾಹನಗಳ ಮೇಲೆ ರಾಮ & ರಾಜ್ ಕಾಲೇಜು ಹತ್ತಿರ ಹೋದೆವು. ಎನ್.ಹೆಚ್. 65 ರಸ್ತೆಯ ಮೇಲೆ ಬ್ಯಾರಿಕೇಟ್ ಹಾಕಿಕೊಂಡು ನಮ್ಮ ವಾಹನದಲ್ಲಿ ನಿಗಾ ಮಾಡಿ ಕುಳಿತುಕೊಂಡಿದ್ದೆವು. ಸುಮಾರು 11:50 ಗಂಟೆಗೆ ವಾಹನದಲ್ಲಿ ಕುಳಿತು ನಿಗಾ ಮಾಡುತ್ತಿದ್ದಾಗ ಮುಂಬೈ ಕಡೆಯಿಂದ ಟಿ.ಎಸ್. ಪಾಸಿಂಗ್ ಕಾರು ಬರುವುದನ್ನು ನೋಡಿ ನಾವು ಸದರಿ ಕಾರನ್ನು ತಡೆದು ನಿಲ್ಲಿಸಿದೆವು. ಕಾರಿನಲ್ಲಿ ಒಬ್ಬ ಚಾಲಕ ಮತ್ತು ಆತನ ಪಕ್ಕ ಇನ್ನೊಬ್ಬ ವ್ಯಕ್ತಿ ಸಹ ಇದ್ದನು. ಅವರನ್ನು ಕಾರಿನಿಂದ ಇಳಿಸಿ ವಿಚಾರಿಸಿದಾಗ ಸದರಿ ಕಾರಿನ ಚಾಲಕನು ತನ್ನ ಹೆಸರು ಸೈಯದ್ ಇರ್ಫಾನುದ್ದಿನ ಕಾರಿನಲ್ಲಿದ್ದ ಇನ್ನೊಬ್ಬ ವ್ಯಕ್ತಿಯ ಹೆಸರು ಜುನ್ಯೆದ್ ಅನ್ಸಾರಿ ಅಂತಾ ತಿಳಿಸಿದರು. ನಾನು ಸದರಿ ಆರೋಪಿತರಿಗೆ ಖಚಿತ ಬಾತ್ಮಿಯ ಕುರಿತು ವಿಚಾರಿಸಿದಾಗ ಅವರು ಮುಂಬೈಯಿಂದ ಎಂ.ಡಿ. ಎಂಬ ಮಾದಕ ವಸ್ತುವನ್ನು ದುಡ್ಡಿನ ಆಸೆಗಾಗಿ ಹೈದ್ರಾಬಾದ ಪಟ್ಟಣಕ್ಕೆ ಒಯ್ದು ಮಾರಾಟ ಮಾಡುತ್ತಿದ್ದೇವೆ ಅಂತಾ ತಿಳಿಸಿದರು. ಆರೋಪಿತರಿಗೆ ಬ್ಯಾಗ್ ತೋರಿಸುವಂತೆ ಹೇಳಿದಾಗ ಅವರು ಬ್ಯಾಗನ್ನು ಪಂಚರ ಸಮಕ್ಷಮ ನಮಗೆ ತೋರಿಸಿದರು ಮತ್ತು ಅದರಲ್ಲಿನ ಎರಡು ಪಾಕೇಟಗಳು ಸಹ ತೋರಿಸಿದರು. ಸದರಿ ಪಾಕೇಟಗಳನ್ನು ಚಾ.ಸಾ. 5 ರವರ ಕಡೆಯಿಂದ ತೂಕ ಮಾಡಿಸಿದಾಗ ಒಂದು ಪಾಕೇಟ್ 242 ಗ್ರಾಂ. ಮಾದಕ ವಸ್ತು ಇತ್ತು, ಇನ್ನೊಂದು ಪಾಕೇಟನಲ್ಲಿ 257 ಗ್ರಾಂ. ಎಂ.ಡಿ. ಮಾದಕ

ವಸ್ತು ಇತ್ತು. ಸ್ಥಳದಲ್ಲಿ ಸದರಿ ಎರಡು ಪಾಕೇಟಗಳಿಂದ ತಲಾ 5 ಗ್ರಾಂ. ಪ್ರತ್ಯೇಕವಾಗಿ ಎರಡು ಪಾಕೇಟಗಳಲ್ಲಿ ಸಂಗ್ರಹಿಸಿ ಸದರಿ ಸ್ಯಾಂಪಲ್ ಪಾಕೇಟಗಳಿಗೆ ಬಿ.1 ಮತ್ತು ಬಿ.2 ಅಂತಾ ಗುರುತು ಮಾಡಲಾಯಿತು. ಮೂಲ ಎರಡು ಪಾಕೇಟಗಳಿಗೆ ಎ 1 ಮತ್ತು ಎ 2 ಅಂತಾ ಗುರುತು ಮಾಡಿ ಎಲ್ಲಾ ಪಾಕೇಟಗಳಿಗೆ ಹೆಚ್.ಬಿ.ಡಿ. ಅಂತಾ ಅರಗಿನಿಂದ ಮುದ್ರೆ ಹಾಕಿದೆನು ಮತ್ತು ಅವುಗಳಿಗೆ ನನ್ನ ಮತ್ತು ಚಾ.ಸಾ. 2, 3 ರವರ ಸಹಿವುಳ್ಳ ಚೀಟಿಗಳನ್ನು ಅಂಟಿಸಿದೆನು. ಸ್ಥಳದಲ್ಲಿ ನಾನು ಆರೋಪಿತರಿಗೆ ಅವರ ಅಂಗ ಶೋಧನೆಯನ್ನು ಪತ್ರಾಂಕಿತ ಅಧಿಕಾರಿಳಿಂದ ಮಾಡಿಸಬೇಕೆ ಅಥವಾ ನ್ಯಾಯಾಧೀಶರಿಂದ ಮಾಡಿಸಬೇಕೆ ಅಂತಾ ನಾನು ಹಿಂದಿ ಭಾಷೆಯಲ್ಲಿ ಅವರಿಗೆ ಕೇಳಿದೆನು. ಆಗ ಆರೋಪಿತರು ಪತ್ರಾಂಕಿತ ಅಧಿಕಾರಿಗಳಿಂದ ಅಂಗ ಶೋಧನೆಗೆ ಒಳಪಡಲು ಸೂಚಿಸಿದರು. ನಂತರ ನಾವೆಲ್ಲರೂ ನಮ್ಮ ಅಂಗ ಶೋಧನೆ ಮಾಡಿಕೊಂಡೆನು ಆಗ ಯಾವುದೇ ಮಾದಕ ವಸ್ತು ಇರುವುದಿಲ್ಲಾ ಎಂದು ಖಚಿತಪಡಿಸಿಕೊಂಡೆವು. ನಂತರ ಚಾ.ಸಾ. 19 ರವರು ಸ್ಥಳದಲ್ಲಿ ಆರೋಪಿತರಿಗೆ ಕಲಂ 50 ಎನ್.ಡಿ.ಪಿ.ಎಸ್. ಕಾಯ್ದೆ ಅಡಿಯಲ್ಲಿ ನೋಟೀಸು ನೀಡಿದರು. ಆಗ ಆರೋಪಿತರು ಒಪ್ಪಿಗೆ ಸೂಚಿಸಿದರು. ನಂತರ ಚಾ.ಸಾ. 19 ರವರು ಮೊದಲು 1 ನೇ ಆರೋಪಿತನನ್ನು ಅಂಗ ಶೋಧನೆ ಮಾಡಲಾಗಿ ಆತನ ಹತ್ತಿರ ಒಂದು ಒಪ್ಪೊ ಕಂಪನಿಯ ಮೋಬೈಲ್ ದೊರಕಿತ್ತು, 2 ನೇ ಆರೋಪಿತನನ್ನು ಅಂಗ ಶೋಧನೆ ಮಾಡಲಾಗಿ ಆತನ ಹತ್ತಿರ ಒಂದು ಒನ್ ಪ್ಲಸ್ ಕಂಪನಿಯ ಮೋಬೈಲ್ ಮತ್ತು ಒಂದು ಚಿಕ್ಕದಾದ ಎಲೆಕ್ಟ್ರಾನಿಕ ತೂಕ ಮಾಡುವ ಯಂತ್ರ ದೊರಕಿತ್ತು. ಸದರಿ ಮೋಬೈಲಗಳು ಮತ್ತು ತೂಕದ ಯಂತ್ರವನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡು ಅವುಗಳಿಗೆ ಹೆಚ್.ಬಿ.ಡಿ. ಎಂಬ ಮುದ್ರೆಯಿಂದ ಸೀಲ್ ಹಾಕಿದೆನು. ಸ್ಥಳದಲ್ಲಿಯೇ ಮುಂಜಾನೆ 11:50 ರಿಂದ ಮಧ್ಯಾಹ್ನ 12:50

ಗಂಟೆಯ ವರೆಗೆ ಜಪ್ತಿಪಡಿಸಿಕೊಂಡೆನು. ಆರೋಪಿತರು ಚಾಕಲೇಟ್ ಬಣ್ಣದ ರೆಗರಿಝಿನ್ ಬ್ಯಾಗನಲ್ಲಿ ಎಂ.ಡಿ. ಮಾದಕ ವಸ್ತುವನ್ನು ಇಟ್ಟು ಕಾರಿನಲ್ಲಿ ಇಟ್ಟಿದ್ದರು. ಸ್ಥಳದಿಂದ ನನಗೆ ಬಾತ್ಮಿ ಬಂದ ಸಂಖ್ಯೆ ಕಾರು ಮತ್ತು ಆರೋಪಿತರಿಂದ ಜಪ್ತಿಪಡಿಸಿಕೊಂಡ ಎಲ್ಲಾ ವಸ್ತುಗಳನ್ನು ವಶಪಡಿಸಿಕೊಂಡೆನು. ಪಂಚನಾಮೆಯ ಕಾಲಕ್ಕೆ ವಿಡಿಯೋ ಗ್ರಾಫಿ ಮತ್ತು ಫೋಟೋ ತೆಗೆಸಿರುತ್ತೇನೆ. ನಂತರ ನಾನು ಆರೋಪಿತರು ಮತ್ತು ಜಪ್ತಿಪಡಿಸಿಕೊಂಡ ವಸ್ತುಗಳೊಂದಿಗೆ ಠಾಣೆಗೆ ಮರಳಿ ಠಾಣಾಧಿಕಾರಿಯವರಿಗೆ ಫಿರ್ಯಾದಿ ಸಲ್ಲಿಸಿ ಇಬ್ಬರು ಆರೋಪಿತರನ್ನು ಮತ್ತುಜಪ್ತಿಪಡಿಸಿಕೊಂಡ ಎಲ್ಲಾ ವಸ್ತುಗಳನ್ನು, ಜಪ್ತಿ ಪಂಚನಾಮೆ ಸಹ ಅವರಿಗೆ ಕೊಟ್ಟಿರುತ್ತೇನೆ. ಸಾಕ್ಷಿ ನಿಶಾನೆ ಪಿ. 3 ಪಂಚನಾಮೆ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ. 3(ಬಿ) ಅಂತಾ ಗುರುತಿಸಲಾಯಿತು. ಸಾಕ್ಷಿ ನಿಶಾನೆ ಪಿ. 1 ಭಾವಚಿತ್ರ ಮತ್ತು ಅದರಲ್ಲಿನ ಕಾರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುದ್ದೆ ಮಾಲು 1 ಮತ್ತು 2 ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಪಂಚನಾಮೆಯ ಕಾಲಕ್ಕೆ ಜಪ್ತಿಪಡಿಸಿಕೊಂಡ ಒಂದು ಚಾಕಲೇಟ್ ಬಣ್ಣದ ರೆಗ್ಝೀನ್ ನೋಡಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು 3 ಅಂತಾ ಗುರುತಿಸಲಾಯಿತು. ಸಾಕ್ಷಿ ವರದಿ ಮತ್ತು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಶಾನೆ ಪಿ. 4 ಅಂತಾ ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ. 4(ಎ) ಅಂತಾ ಗುರುತಿಸಲಾಯಿತು. ನಾನು ಠಾಣೆಯಲ್ಲಿದ್ದಾಗ ಬಾತ್ಮಿ ಬಂದ ತಕ್ಷಣ ಪೊಲೀಸ ಉಪಾಧೀಕ್ಷಕರು ಹುಮನಾಬಾದ ರವರಿಂದ ಪಡೆದ ಪರವಾನಿಗೆಯನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ. 5 ಅಂತಾ ಗುರುತಿಸಲಾಯಿತು. ಪರವಾನಿಗೆ ಪಡೆದ ತಕ್ಷಣ ನಾನು ಸದರಿ ಮಾಹಿತಿಯನ್ನು ಠಾಣಾ ದಿನಚರಿಯಲ್ಲಿ ನಮೂದು

ಮಾಡಿರುತ್ತೇನೆ. ಸಾಕ್ಷಿ ಠಾಣಾ ದಿನಚರಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ. 6 ಅಂತಾ ಗುರುತಿಸಲಾಯಿತು. ನಿಶಾನೆ ಪಿ. 6 ದಾಖಲಿಸಿದ ನಂತರ ನಿಶಾನೆ ಪಿ. 6 ರಲ್ಲಿನ ವಿಷಯದ ಕುರಿತು ನನ್ನ ತಕ್ಷಣ ಮೇಲಾಧಿಕಾರಿಯವರಿಗೆ ಲಿಖಿತ ರೂಪದಲ್ಲಿ ಮಾಹಿತಿ ನೀಡಿರುತ್ತೇನೆ. ಸಾಕ್ಷಿ ಸದರಿ ದಾಖಲೆ ಮತ್ತು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಶಾನೆ ಪಿ. 7 ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ. 7(ಎ) ಅಂತಾ ಗುರುತಿಸಲಾಯಿತು.

ಈಗ ನ್ಯಾಯಾಲಯದ ಸಮಯ ಮುಗಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಸವಕಲ್ಯಾಣ. ಜಿಃ ಬೀದರ .